ಪಶು ವೈದ್ಯರನ್ನು ನಿಯೋಜಿಸುವುದು

207 (721) ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ (ಕುಂದಗೋಳ) :– ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಕುಂದಗೋಳ ಮತಕ್ಷೇತ್ರದಲ್ಲಿ ಪಶು ಸಂಗೋಪನಾ ಇಲಾಖೆಯಲ್ಲಿ ಮಂಜೂರಾತಿಯಾದ ಹುದ್ದೆಗಳ ಸಂಖ್ಯೆ ಎಷ್ಟು ; (ಹುದ್ದೆಗಳ ವಿವರ ನೀಡುವುದು)

(ಆ) ಅವುಗಳಲ್ಲಿ ಸದ್ಯ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು);

(ಇ) ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ಹಾಗೂ ಎಷ್ಟು ವರ್ಷಗಳಿಂದ ಖಾಲಿ ಇರುತ್ತವೆ; (ವಿವರ ನೀಡುವುದು);

(ಈ) ಅನೇಕ ಹುದ್ದೆಗಳು ಖಾಲಿ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಬಂದಿದ್ದರೆ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಊ) ಯಾವಾಗ ಖಾಲಿ ಹುದ್ದೆಗಳನ್ನು ತುಂಬಲಾಗುವುದು;

ಶ್ರೀ ರೇವೂನಾಯಕ್ ಬೆಳಮಗಿ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು):–

ಕುಂದಗೋಳ ವಿಧಾನ ಸಭಾ ಕ್ಷೇತ್ರದಲ್ಲಿನ ಪಶುವೈದ್ಯಕೀಯ ಸಂಸ್ಥೆಗಳಿಗೆ ಮಂಜೂರಾದ ಹುದ್ದೆಗಳ ವಿವರ ಕೆಳಕಂಡಂತಿದೆ.

ಕ್ರ. ಸಂ.	ವೃಂದ	ಮಂಜೂರು
1	ಸಹಾಯಕ ನಿರ್ದೇಶಕರು	1
2	ಪಶುವೈದ್ಯ ಅಧಿಕಾರಿ	14
3	ಜಾನುವಾರು ಅಧಿಕಾರಿ	1
4	ಹಿರಿಯ ಪಶುವೈದ್ಯ ಪರೀಕ್ಷಕರು	6
5	ಪಶುವೈದ್ಯ ಪರೀಕ್ಷಕರು	19

6	ಪಶುವೈದ್ಯ ಸಹಾಯಕರು	4
7	ಲಿಪಿಕ ವರ್ಗ	0
8	ವಾಹನ ಚಾಲಕರು	1
9	ಡಿ–ದರ್ಜೆನೌಕರರು	14

ಆ) ಅವುಗಳಲ್ಲಿ ಸದ್ಯ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ ಈ ಕೆಳಕಂಡಂತಿದೆ:

ಕ್ರ. ಸಂ.	ವೃಂದ	ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ
1	ಪಶುವೈದ್ಯ ಅಧಿಕಾರಿ	7
2	ಜಾನುವಾರು ಅಧಿಕಾರಿ	1
3	ಹಿರಿಯ ಪಶುವೈದ್ಯ ಪರೀಕ್ಷಕರು	6
4	ಪಶುವೈದ್ಯ ಪರೀಕ್ಷಕರು	16
5	ಪಶುವೈದ್ಯ ಸಹಾಯಕರು	2
6	ವಾಹನ ಚಾಲಕರು	1
7	ಡಿ–ದರ್ಜೆನೌಕರರು	25

ಇ) ಖಾಲಿ ಇರುವ ಹುದ್ದೆಗಳು ಮತ್ತು ಎಷ್ಟು ವರ್ಷಗಳಿಂದ ಖಾಲಿ ಇವೆ ಎಂಬುದರ ವಿವರ:

ಕ್ರ. ಸಂ.	ವೃಂದ	ಖಾಲಿ ಹುದ್ದೆಗಳ ಸಂಖ್ಯೆ	ಎಷ್ಟು ವರ್ಷಗಳಿಂದ ಖಾಲಿ ಇರುತ್ತದೆ
1	ಸಹಾಯಕ ನಿರ್ದೇಶಕರು	1	30–5–2012ರಿಂದ
2	ಪಶುವೈದ್ಯ ಅಧಿಕಾರಿ	7	3 ವರ್ಷಗಳಿಂದ
5	ಪಶುವೈದ್ಯ ಪರೀಕ್ಷಕರು	3	8 ವರ್ಷಗಳಿಂದ
6	ಪಶುವೈದ್ಯ ಸಹಾಯಕರು	2	8 ವರ್ಷಗಳಿಂದ
9	ಡಿ–ದರ್ಜೆನೌಕರರು	19	7 ವರ್ಷಗಳಿಂದ

ಈ) ಬಂದಿದೆ

(ಉ)1. ಸಹಾಯಕ ನಿರ್ದೇಶಕರು:– ಪಶುವೈದ್ಯಾಧಿಕಾರಿಗಳ ವೃಂದದಿಂದ ಸಹಾಯಕ ನಿರ್ದೇಶಕರ ವೃಂದಕ್ಕೆ ಮುಂಬಡ್ತಿ ನೀಡುವ ಸಂದರ್ಭದಲ್ಲಿ ಆದ್ಯತೆ ಮೇಲೆ ತುಂಬಲು ಕ್ರಮ ಕೈಗೊಳ್ಳಲಾಗುವುದು. ಆದಾಗ್ಯೂ ಖಾಲಿ ಖಾಲಿ ಇರುವ ಈ ಹುದ್ದೆಗೆ ಸಹಾಯಕ ನಿರ್ದೇಶಕರೊಬ್ಬರನ್ನು ಅಧಿಕ ಪ್ರಭಾರದಲ್ಲಿಡಲು ವ್ಯವಸ್ಥೆಮಾಡಲಾಗಿದೆ.

2. ಪಶುವೈದ್ಯಾಧಿಕಾರಿಗಳು: ರಾಜ್ಯದಲ್ಲಿ ಪಶುವೈದ್ಯಾಧಿಕಾರಿಗಳ ಹುದ್ದೆಯನ್ನು ವಿಶೇಷ ನೇಮಕಾತಿ ನಿಯಮಗಳಡಿಯಲ್ಲಿ ತುಂಬುವ ಪ್ರಸ್ತಾವನೆ ಪರಿಶೀಲನೆಯಲ್ಲಿದ್ದು, ವಿಶೇಷ ನೇಮಕಾತಿ ನಿಯಮಗಳು ರಚನೆಯಾದ ನಂತರ ಈ 7 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಆದ್ಯತೆಯ ಮೇಲೆ ಭರ್ತಿಮಾಡಲು ಕ್ರಮ ವಹಿಸಲಾಗುವುದು.

3. ಪಶುವೈದ್ಯಕೀಯ ಪರೀಕ್ಷಕರು:– ಈ 3 ಖಾಲಿ ಹುದ್ದೆಗಳನ್ನು ಪಶುವೈದ್ಯಕೀಯ ಸಹಾಯಕರ ವೃಂದದ ಹುದ್ದೆಯಿಂದ ಮುಂಬಡ್ತಿ ನೀಡುವಾಗ ಆದ್ಯತೆಯ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುವುದು.

4. ಪಶುವೈದ್ಯ ಸಹಾಯಕರು: ಈ 2 ಖಾಲಿ ಹುದ್ದೆಗಳನ್ನು ಡಿ– ದರ್ಜೆ ನೌಕರರ ಹುದ್ದೆಯಿಂದ ಮುಂಬಡ್ತಿ ನೀಡುವಾಗ ಆಧ್ಯತೆಯ ಮೇಲೆ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

5. ಡಿ.–ದರ್ಜೆ– ನೌಕರರು:– ನೇರ ನೇಮಕಾತಿ ಹಾಗೂ ಅನುಕಂಪಾರ್ಥ ಆಧಾರದ ಮೇಲೆ ಭರ್ತಿ ಮಾಡುವಾಗ ಆದ್ಯತೆ ಮೇರೆಗೆ ತುಂಬಲು ಕ್ರಮವಹಿಸಲಾಗುವುದು ಹಾಗೂ ಅವಶ್ಯವಿರುವ ಕಡೆ ಹೊರಗುತ್ತಿಗೆ ಆಧಾರದ ಮೇಲೆ ಡಿ–ದರ್ಜೆ– ನೌಕರರ ಕೆಲಸ ನಿರ್ವಹಿಸಲಾಗುವುದು

ಊ) ಮೇಲೆ ತಿಳಿಸಿರುವಂತೆ ಕ್ರಮವಹಿಸಲಾಗುವುದು.

ಬೀದರ್ ಜಿಲ್ಲಾ ಆಸ್ಪತ್ರೆಯ ಮೂಲಭೂತ ಸೌಕರ್ಯಗಳು

273 (880) ಶ್ರೀ ರಹೀಂ ಖಾನ್ (ಬೀದರ್) :– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೀದರ್ ನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಮೂಲಭೂತ ಸೌಕರ್ಯ ಇಲ್ಲದಿರುವುದರಿಂದ ರೋಗಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದರೆ, ಆಸ್ಪತ್ರೆಯಲ್ಲಿ ಸಿ.ಟಿ. ಸ್ಕ್ಯಾನ್ ಹಾಗು ಇನ್ನಿತರ ಮೂಲ ಸೌಲಭ್ಯಗಳು ಇಲ್ಲಿಯ ಬಡ ರೋಗಿಗಳಿಗೆ ಸಿಗುವಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

(ವಿವರ ನೀಡುವುದು)